ಸಂಪೂರ್ಣ ಮರೆತು ಬಿಟ್ಟೆನೆಂದೇನಲ್ಲ. ಹಾಗಾಗುವುದು ಸಾಧ್ಯವೂ ಇರಲಿಲ್ಲ. ಹೇಗಿದ್ದರೂ ತಿಂಗಳಿಗೊಂದು ಬಾರಿಯಾದರೂ ನನ್ನನ್ನು ನೋಡಲು ಬಂದೇ ಬರುತ್ತಿದ್ದ. ಹಾಗೆ ಬಂದಾಗಲೊಮ್ಮೆ ಪ್ರಭಾ ಇತ್ತೀಚೆಗೆ ಬಹಳವೇ ಬದಲಾಗಿ ಹೋಗಿದ್ದಳೆಂಬುವುದರ ಕುರಿತು ಹೇಳಿದ್ದ. ಉಣ್ಣಿ ಕೇರಳದವನೆಂದು ಹೇಳಿಕೊಂಡಿದ್ದರೂ ಮಳೆಗಾಲ ಶುರುವಾದಾಗಲಷ್ಟೇ ಕೇರಳಕ್ಕೆ ಹೊರಡುತ್ತಿದ್ದ. ಉಳಿದಂತೆ ಮಳೆ ಮುಗಿಯುತ್ತಿದ್ದಂತೇ ಊರೂರು ಸುತ್ತಿ, ಅರಿಸಿನ ಬಾಳೆ ಬೆಳೆಯಲು ನೆಲ ಗುತ್ತಿಗೆ ಪಡೆಯುತ್ತಿದ್ದ. ಬೇಸಿಗೆಯಲ್ಲಿ ಖಾಲಿ ಬಿದ್ದಿರುವ ನೆಲದಿಂದ ಬರುವಷ್ಟು ಬರಲಿ ಅಂದುಕೊಂಡವರು, ಆದಷ್ಟು ಬೆಳೆದುಕೊಂಡು, ಉಳಿದ ನೆಲ ಖಾಲಿ ಬಿಟ್ಟವರು, ಒಂದಿಷ್ಟೂ ಮೈ ನೋಯದೆ ದುಡ್ಡು ಕಾಣ ಬಯಸುವವರು ಅವನಿಗೆ ನೆಲ ಗುತ್ತಿಗೆ ಕೊಟ್ಟು ಕೃತಾರ್ಥರಾಗುತ್ತಿದ್ದರು. ಉಣ್ಣಿಗೆ ಊರಿನಲ್ಲಿ ಮಹಲಿನಂಥ ಮನೆ, ಅಪ್ಪ ಅಮ್ಮ, ಅಣ್ಣ ತಂಗಿ ಹೀಗೆ ದೊಡ್ಡ ಸಂಸಾರ, ಸುಖ ಸಂತೋಷ ಎಲ್ಲ ಇದ್ದರೂ ಹೀಗೆ ಇಲ್ಲಿ ಬಂದ ತೀರ ಕೆಲಸದಾಳಿನ ಸಮಕೆ ನಿಂತು ಕೆಲಸ ಮಾಡಿ ಹಣ ಸಂಪಾದಿಸಲು ಇಳಿದಿದ್ದ. ಅದನ್ನು ನೋಡುವಾಗ ನಾಯರೇನು, ಊರೇ ಮೆಚ್ಚಬೇಕು. ಹಾಗಿರುವಾಗ ಪ್ರಭಾ ಹೇಗೆ ಹೊರತಾಗಬೇಕು? ಬಾಪುಟ್ಟಿಯಾದರೂ ಹೇಗೆ ಹೊರತಾಗಬೇಕು? ಇಲ್ಲ ನಾನಾದರೂ? ಉಣ್ಣಿಯ ಮಲಯಾಳಂ ಸ್ವಚ್ಛವಿತ್ತು. ಅವನಿಗೆ ಕನ್ನಡವೂ ಬರುತ್ತಿತ್ತು. ಅದನ್ನು ಅವನು ಮೂಗಿನಲ್ಲಿ ಮಾತಾಡಿದರೂ ಚಂದ ಕಾಣುತ್ತಿತ್ತು. ಅವನಿಗೆ ಒಳ್ಳೆಯ ಇಂಗ್ಲಿಷ್ ಕೂಡ ಬರುತ್ತಿರಬೇಕು. ಹಾಗಂತ ನಾನು ಬಾಪುಟ್ಟಿ

